ಶ್ರೀ ಸಿ. ಬೈರೇಗೌಡ.—ಇದರಲ್ಲಿರುವ ನೀರಾವರಿ ಯೋಜನೆಗಳ ಇನ್‌ವೆಸ್ಟಿಗೇಷನ್‌ಗಳು ಮುಗಿದಿವೆಯೇ ಇಲ್ಲದಿದ್ದರೆ ಇನ್ನೂ ಎಷ್ಟು ಕಾಲ ಇದಕ್ಕೆ ಬೇಕಾಗುತ್ತದೆ ?

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಇದರ ಇನ್‌ವೆಸ್ಟಿಗೇಷನ್ ಮುಗಿದು ಈಗ ಸರಕಾರದ ಮುಂದೆ ಬಂದಿದೆ.

ಶ್ರೀ ಸಿ. ಬೈರೇಗೌಡ.—ಪಟ್ಟಿಯಲ್ಲಿರುವ ಮಣಿಗಟ್ಟ ಹೊಸಕೆರೆ ಕೆಲಸವನ್ನು 1967—68 ರ ಬಜೆಟ್ಟಿನಲ್ಲೇ ಸೇರಿಸಲಾಗಿತ್ತು, ಆದರೆ ಈ ಸಾರಿ ಬಜೆಟ್ಟಿನಲ್ಲಿ ಇದು ಸೇರಿಲ್ಲ. ಇದೊಂದನ್ನಾ ನರೂ ಬೇಗನೆ ಮಾಡಿಕೊಡುತ್ತೇವೆ ಎನ್ನುವ ಆಶ್ವಾಸನೆ ಕೊಡುತ್ತೀರಾ ?

ಶ್ರೀ ಹೆಚ್.ಎಂ. ಚನ್ನಬಸಪ್ಪ.—ಮಾನ್ಯ ಸದಸ್ಯರಿಗೆ ಮಣಿಗಟ್ಟ ಕೆರೆ ವಿಚಾರ ನರಕಾರಕ್ಕಿಂತ ಚೆನ್ನಾಗಿ ಗೊತ್ತಿದೆ. ಆದರೆ ಇದರಲ್ಲಿ ಅನೇಕ ಕಷ್ಟಗಳು ಬರುತ್ತಿವೆ. ಮೊದಲನೆಯದು ಒಂದು ಎಕರೆಗೆ ಎರಡು ಸಾವಿರ ರೂಪಾಯಿಗಳ ಮೇಲ್ಪಟ್ಟು ಖರ್ಚು ಬರುತ್ತದೆ. ಎರಡನೇ ಕಷ್ಟ ಇದರ ಕೆಲಸಗಳನ್ನು ಮಂಜೂರು ಮಾಡಿದರೂ ಕೂಡ ಇಲ್ಲಿನ ಜನರು ಇದಕ್ಕೆ ಅವಶ್ಯಕವಾಗಿರುವ ಜಮೀನು ಗಳನ್ನೇ ಕೊಡುತ್ತಿಲ್ಲ. ಆದುದರಿಂದ ಕೆರೆ ಕೆಲಸಗಳನ್ನು ಮಾಡುವಾಗ ಆದಷ್ಟೂ ಕಮ್ಮಿ ಖರ್ಚಿನಲ್ಲಿ ಆಗುವ ಹಾಗೂ ಹೆಚ್ಚು ನೀರು ಕೊಡುವ ಕೆರೆ ಕೆಲಸಗಳನ್ನು ತೆಗೆದುಕೊಳ್ಳಲು ಹೆಚ್ಚು ಪ್ರಾಶಸ್ತ್ಯ ಕೊಡಬೇಕೆಂದು ಇದ್ದೇವೆ.

ಶ್ರೀ ಸಿ. ಬೈರೇಗೌಡ.—ನಾನು ಹೇಳಿದ ಮಣಿಗಟ್ಟ ಕೆರೆ ಕೆಲಸ ಮಾಡಿದರೆ ನಮ್ಮ ತಾಲ್ಲೂಕಿಗೆ ಹೆಚ್ಚು ಉಪಯೋಗವಾಗುತ್ತದೆ ಮತ್ತು ಸುಮಾರು 450 ಎಕರೆಯಷ್ಟು ಭೂಮಿಗೆ ಪ್ರಯೋಜನ ವಾಗುತ್ತದೆ ಮತ್ತು ನಮ್ಮ ಜಿಲ್ಲೆ ಬರಗಾಲಕ್ಕೆ ಸಿಕ್ಕಿರುವ ಪ್ರಾಂತವಾದುದರಿಂದ ಇದನ್ನು ಆದಷ್ಟು ಜಾಗ್ರತೆ ಮಂಜೂರು ಮಾಡುತ್ತೀರಾ ?

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಕೋಲಾರ ಜಿಲ್ಲೆಯ ತಮ್ಮ ತಾಲ್ಲೂಕಿನಲ್ಲಿ ಎಷ್ಟೋ ಕೆರೆ ಗಳು ಇನ್ನೂ ಆಗಬೇಕಾಗಿವೆ, ಇದರೊಳಗೆ ಯಾವುದು ಉತ್ತಮವಾಗಿ ಕೈಗೆ ತೆಗೆದುಕೊಳ್ಳ ಬಹುದೋ ಅಂತಹವುಗಳಿಗೆ ಪ್ರಯತ್ನ ಮಾಡಿ ಸಾಧ್ಯವಾದಷ್ಟು ಇದನ್ನು ನಹಾನುಭೂತಿಯಿಂದ ಪರಿಶೀಲನೆ ಮಾಡುತ್ತೇನೆ.

Declaration Forms For Issue of Ration Cards

203. Sri B. B. SAYANAK (Belgaum).—

Will the Minister of State for Food and Civil Supplies be pleased to state:—

(*a*) whether the aplication forms for issuing new ration cards are only in Kannada and English language in Belguam City Municipal Area ;

(*b*) whether it is a fact that more than 46 per cent of population of Belguam City Municipality is Marathi speakers

(c) if so, the reasons why the Marathi application forms are not made available to the people in Belguam City Mnicipality ration shops ?

Smt. E. E. VAZ (Minister of State for Food and Civil Supplies).—

(*a*) Declaration forms for issuing ration cards are in English only.

(*b*) According to the 1961 census, the proportion of speakers with Marathi as mother tongue in Belgaum Town group (Belgaum City and Belgaum Cantonment together) is 46.3 per cent.

(c) Printing of Declaration forms in various languages would involve addiitonal expenditure which is being avoided in the interest of economy. Besides, the printing of forms in various languages would render the supervision less effective.

Sri B. B. SAYANAK.—Wrong answers are given and so, in protest, I do not want to put Supplementaries.

†SMT. E. E. VAZ.—I object to this, Madam.

MADAM SPEAKER.—We will take up the next Question.

Damage to Hiduvali Lands in Madhugiri Sub-Division

216. Sri R. CHIKKAIAH (Madhugiri).—

Will the Minister for Public Works and Electricity be pleased to state:—

(a) whether it has come to the notice of the Government that extensive Hiduvali lands have been rendered unfit for cultivation in Madhugiri Sub-Division on account of the breaches of the sides of the streams due to heavy and unexpected rains during May 1972;

(b) whether the Government has taken any steps to restore the breached sides of the streams by putting up bunds and providing revetment to the same early;

(c) if not, whether they porpose to take immediate steps to put up bunds and revetment in order to avoid further damages to the affected Hiduvali lands?

Sri H. M. CHANNABASAPPA (Minister for Public Works and Electricity).—

(a) Yes.

(b) Yes.

(c) Does not arise in view of reply to Clause (b).

ಶ್ರೀ ಆರ್. ಚಿಕ್ಕಯ್ಯ.—ಇಲ್ಲಿ ಮಳೆಯ ಅನಾಹುತದಿಂದ ನಮ್ಮ ರೈತರಿಗೆ ಬಹಳ ತೊಂದರೆಗಳಾಗಿರುವುದು ಸರಕಾರದ ಗಮನಕ್ಕೆ ಬಂದಿದೆ. ಆದುದರಿಂದ ಇದರ ಕೆಲಸಗಳನ್ನೆಲ್ಲಾ ಮಳೆಗಾಲ ಬರುವುದಕ್ಕೆ ಮುಂಚೆ ಮಾಡಿಸಲು ಸರಕಾರದವರು ಪ್ರಯತ್ನ ಮಾಡುತ್ತಾರೆಯೇ?

†ಶ್ರೀ ಹೆಚ್. ಎಂ. ಚನ್ನಬಸಪ್ಪ.—ಮಾನ್ಯ ಸದಸ್ಯರು ಹೇಳುವ ವಿಚಾರಗಳು ಬಹಳ ಮಹತ್ವ ವಳ್ಳಿದ್ದು. ಮಳೆಗಾಲ ಬರುವುದರೊಳಗೆ ಸಾಧ್ಯವಾದಷ್ಟು ಬೇಗನೆ ಕೆಲಸಗಳನ್ನು ಮಾಡಲು ಪ್ರಯತ್ನ ಮಾಡುತ್ತೇವೆ.